೨-೦೦ ಪಿ.ಎಂ.

ಶ್ರೀ ಜಿ. ಎಸ್. ಬಾಗಲಕೋಟಿ.—ಅಪ್ಪಿಕೋ ಚಳುವಳಿಯಿಂದ ಸರ್ಕಾರಕ್ಕೆ, ಸರ್ಕಾರದ ಕೆಲಸ ಕಾರ್ಯಗಳಿಗೆ ಸಹಕಾರ ಸಿಕ್ಕಿದೆಯೋ ಇಲ್ಲವೋ ಆ ಪ್ರಶ್ನೆ ಬೇರೆ. ಆದರೆ ಈಗ ಸನ್ಮಾನ್ಯ ಸದಸ್ಯರು ಏನು ಪ್ರಶ್ನೆಯನ್ನು ಎತ್ತಿದ್ದಾರೆಂದರೆ ಆ ಚಳುವಳಿಗೆ ಬೇರೆ ದೇಶದಿಂದ ಹಣ ಬರುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ, ಆ ಬಗ್ಗೆ ನಮ್ಮ ಇಲಾಖೆಯಲ್ಲಿ ಯಾವುದೇ ತರಹ ಮಾಹಿತಿ ಇಲ್ಲ. ಮಾನ್ಯ ಸದಸ್ಯರು ನಿಶ್ಚಿತವಾದ ಉದಾಹರಣೆಗಳನ್ನು ಕೊಟ್ಟರೆ ಆ ಬಗ್ಗೆ ತನಿಖೆ ಮಾಡಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಶರಾವತಿ ಟೇಲ್‌ಎಂಡ್ ಯೋಜನೆ, ಬೇಡ್ತಿ ಯೋಜನೆ ಕಾರ್ಯಗತವಾಗಬೇಕಾದರೆ, ಚಕ್ರಾ ಯೋಜನೆ ಮಾಡುವಾಗ ಅಪ್ಪಿಕೋ ಚಳುವಳಿಯವರು ನಮ್ಮ ಕನ್ನಡದ ದೊಡ್ಡ ದೊಡ್ಡ ಸಾಹಿತಿಗಳನ್ನು ಕರೆಸಿ ಭಾಷಣ ಮಾಡಿಸುತ್ತಾರೆ. ಸಾಹಿತಿಗಳು ಪರಿಸರ ನಾಶವಾಗುತ್ತದೆ ಹಾಗೆ ಹೀಗೆಯೆಂದು ಹೇಳುತ್ತಾರೆ. ದಯವಿಟ್ಟು ಅಪ್ಪಿಕೋ ಚಳುವಳಿಯವರು ಏನಾದರೂ ರಾಜ್ಯದ ಅಭಿವೃದ್ಧಿಗೆ ವಿರೋಧಿಗಳಿದ್ದಾರೆಯೇ ಹೇಗೆ ಎನ್ನುವುದನ್ನು ತಾವು ಪಶ್ಚಿ ಹೆಚ್ಚಬೇಕು.

ಶ್ರೀ ಜಿ. ಎಸ್. ಬಾಗಲಕೋಟಿ.—ಆ ರೀತಿ ಯಾವುದೇ ತರಹ ತನಿಖೆ ಮಾಡುವ ಅವಶ್ಯಕತೆ ಬಂದಿಲ್ಲ. ಈ ರೀತಿಯು ತನಿಖೆ ಮಾಡಿಲ್ಲ.

ಶ್ರೀ ಆರ್. ಎನ್. ನಾಯಕ್.—ಈಗ ಮಾಡಿ.

ಶ್ರೀ ಜಿ. ಎಸ್. ಬಾಗಲಕೋಟಿ.—ಏವರ ಕೊಡಿ ಮಾಡುತ್ತೇನೆ.

ಹಾಲಿ ಉತ್ಪಾದಕರ ಸಹಕಾರ ಸಂಘಗಳು

೬೭೪ (೧೯೨೫) ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ವಸತಿ ಹಾಗೂ ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳೆಷ್ಟು ?

ಆ) ಸದರಿ ಸಂಘಗಳು ಒಂದು ದಿನದಲ್ಲಿ ಸರಬರಾಜು ಮಾಡುತ್ತಿರುವ ಹಾಲಿನ ಪ್ರಮಾಣವೆಷ್ಟು?

ಇ) ಕಳೆದ ೫ ವರ್ಷದಲ್ಲಿ ಸಾರ್ವಜನಿಕರಿಗೆ ವಿತರಣೆ ಮಾಡುವ ಹಾಲಿನ ದರವನ್ನು ಎಷ್ಟು ಬಾರಿ ಏರಿಸಲಾಗಿದೆ? (ವಿವರ ನೀಡುವುದು).

ಶ್ರೀ ಮಹಮ್ಮದ್ ಮೊಯಿನುದ್ದೀನ್ (ವಸತಿ ಹಾಗೂ ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ವಕ್ಫ್ ಸಚಿವರು).—

ಅ) ೧೯೮೮ರ ಏಪ್ರಿಲ್ ಅಂತ್ಯದ ವೇಳೆಗೆ ಅಮೂಲ್ ಮಾದರಿಯ ೪೩೧೧ ಸಹಕಾರ ಸಂಘಗಳನ್ನು ನೋಂದಾಯಿಸಲಾಗಿದ್ದು, ಆ ಪೈಕಿ ೩೮೪೦ ಸಹಕಾರ ಸಂಘಗಳು ಕಾರ್ಯಾಚರಣೆಯಲ್ಲಿವೆ.

ಆ) ಸದರಿ ಸಂಘಗಳು ೧೯೮೮ ಏಪ್ರಿಲ್ ಮಾಹೆಯಲ್ಲಿ ದಿನವೊಂದಕ್ಕೆ ಸರಾಸರಿ ೭.೭೩ ಲಕ್ಷ ಕೆ.ಜಿ. ಹಾಲನ್ನು ಸರಬರಾಜು ಮಾಡುತ್ತಿವೆ.

ಇ) ಕಳೆದ ೫ ವರ್ಷಗಳಲ್ಲಿ ಹಾಲು ಮಾರಾಟ ದರವನ್ನು ೩ ಬಾರಿ ಏರಿಸಲಾಗಿದೆ. ವಿವರ ಇಂತಿದೆ:

ದಿನಾಂಕ		ಹಾಲಿನ ಗುಣಮಟ್ಟ		ದರ ಏರಿಕೆ ವಿವರ (ಪ್ರತಿ ಲೀಟರಿಗೆ)
೧೦-೧೦-೮೩	೧.	ಜಿಡ್ಡು	ಶೇ ೩.೦	ರೂ. ೨.೮೦ ರಿಂದ
		ಜಿಡ್ಡೇತರ ಘನಾಂಶ	ಶೇ ೮.೫	ರೂ. ೩.೨೦ ಕ್ಕೆ.
೧೬-೬-೮೫	೧.	ಜಿಡ್ಡು	ಶೇ .೦	ರೂ. ೩.೨೦ ರಿಂದ
		ಜಿಡ್ಡೇತರ ಘನಾಂಶ	ಶೇ ೮.೫	ರೂ. ೩.೬೦ ಕ್ಕೆ.
	೨.	ಜಿಡ್ಡು	ಶೇ ೪.೫	ರೂ. ೪.೦೦ (ಜಿಡ್ಡಿನಾಂಶ ಜಾಸ್ತಿ ಮಾಡಿ ಮಾರುಕಟ್ಟೆ ಹೊಸದಾಗಿ ಬಿಡುಗಡೆ ಮಾಡಿದ್ದು)
		ಜಿಡ್ಡೇತರ ಘನಾಂಶ	ಶೇ ೮.೫	
೧೫-೪-೮೭	೧.	ಜಿಡ್ಡು	ಶೇ ೩.೦	ರೂ. ೩.೬೦ ರಿಂದ
		ಜಿಡ್ಡೇತರ ಘನಾಂಶ	ಶೇ ೮.೫	ರೂ. ೪.೦೦ ಕ್ಕೆ
	೨.	ಜಿಡ್ಡು	ಶೇ ೪.೫	ರೂ. ೪.೦೦ ರಿಂದ
		ಜಿಡ್ಡೇತರ ಘನಾಂಶ	ಶೇ ೮.೫	ರೂ. ೪.೫೦ ಕ್ಕೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಉಪಾಧ್ಯಕ್ಷರೆ, ೧೯೮೩ರಿಂದ ೧೯೮೫ನೇ ಇಸವಿಯೊಳಗೆ ಮೂರು ಸಾರಿ ಹಾಲಿನ ದರವನ್ನು ಏರಿಸಿದ್ದಾರೆ. ಹಾಲು ಉತ್ಪಾದಕರ ರಕ್ಷಣೆ ಮಾಡಬೇಕೆಂದು ಹಾಲಿನ ದರ ಏರಿಸಿದರೆ ಅದೇ ಟೈಮ್‌ನಲ್ಲಿ ಗ್ರಾಹಕರು ಯಾರಿದ್ದಾರೆ ಅವರಿಗೂ ಕೂಡ ಇದರಿಂದ ತೊಂದರೆಯಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕಾಗಿತ್ತು. ಯಾವ ಆಧಾರದ ಮೇಲೆ ಮೂರು ಬಾರಿ ಹಾಲಿನ ದರವನ್ನು ಏರಿಸಿದ್ದೀರಿ ? ಎರಡನೆಯದಾಗಿ ೪೫೧೧ ಸಹಕಾರಸಂಘಗಳಲ್ಲಿ ೩೮೪೦ ಸಹಕಾರಸಂಘಗಳು ಹಾಲನ್ನು ಸರಬರಾಜು ಮಾಡುತ್ತಿವೆ. ಉಳಿದ ಸಹಕಾರಸಂಘಗಳು ಏನಾದವು ? ಇವೆಲ್ಲಾ ಹಣವನ್ನು ದುರುಪಯೋಗ ಪಡಿಸಿಕೊಂಡಿವೆಯೇ ಅಥವಾ ಯಾವ ಕಾರಣದಿಂದ ಆ ಸಹಕಾರಸಂಘಗಳು ಹಾಲನ್ನು ಸರಬರಾಜು ಮಾಡುತ್ತಿಲ್ಲ ? ಮೂರನೆಯದಾಗಿ ೭.೭೩ ಲಕ್ಷ ಕೆ.ಜಿ. ಹಾಲು ಉತ್ಪಾದನೆಯಾಗುತ್ತಿದೆಯೆಂದು ಹೇಳಿದ್ದಾರೆ. ಯಾವುದೇ ದ್ರವ ಪದಾರ್ಥವನ್ನು ಲೀಟರ್‌ನಲ್ಲಿ ಪಾತ್ರ ಹಳೆಯಲಾಗುತ್ತದೆ. ಕೆ.ಜಿ.ಯಲ್ಲಿ ಹಾಲನ್ನು ಹೇಗೆ ಅಳತೆ ಮಾಡುತ್ತೀರಿ ? ಎಮ್ಮೆ ಹಾಲು ಹಸುವಿನ ಹಾಲು, ಇದರ ತೂಕದಲ್ಲಿ ವ್ಯತ್ಯಾಸವಿದೆ. ಆದ್ದರಿಂದ ಕೆ.ಜಿ.ಯಲ್ಲಿ ಯಾವ ರೀತಿ ಅಳತೆ ಮಾಡುತ್ತೀರಿ ? ಇದರ ಬಗ್ಗೆ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಮಹಮ್ಮದ್ ಮೊಹಿಸಿನ್.—ಹಾಲಿನ ಬೆಲೆ ಏತಕ್ಕೆ ಇನ್‌ಕ್ರೀಸ್ ಆಯಿತು ಅಂದರೆ, ಕಾಸ್ಟ್ ಆಫ್ ಪ್ರೊಡೆಕ್ಷನ್, ಕಾಸ್ ಆಫ್ ಟ್ರಾನ್ಸ್‌ಪೋರ್ಟೇಷನ್‌ನಿಂದ ಬೆಲೆಯನ್ನು ಜಾಸ್ತಿ ಮಾಡ ಲಾಯಿತು. ಹಾಲನ್ನು ಕೆ.ಜಿ.ಯಲ್ಲಿ ಹೇಗೆ ಅಳತೆ ಮಾಡುತ್ತೀರಿ ಅಂದರೆ ೧೦೩ ಕೆ.ಜಿ. ಹಾಲಿಗೆ ೧೦೦ ಲೀಟರ್ ಆಗುತ್ತದೆ. ಗ್ರಾಹಕರು ಲೀಟರಿನಲ್ಲಿ ತೆಗೆದುಕೊಳ್ಳುವುದರಿಂದ ಕೆ.ಜಿ. ಯಲ್ಲಿ ಮಾರಾಟ ಮಾಡುತ್ತಿಲ್ಲ. ಲೀಟರಿನಲ್ಲಿ ಕೊಡುತ್ತಿದ್ದೇವೆ. ಸಹಕಾರಸಂಘಗಳ ಬಗ್ಗೆ ಹೇಳುವುದಾದರೆ ೪೬೦ ಸಹಕಾರಸಂಘಗಳು ಕೆಲಸ ಮಾಡುತ್ತಿಲ್ಲ. ಅದರಲ್ಲಿ ಡಿಫಾಲ್ಟ್ ಆಗಿರತಕ್ಕ ಸೊಸೈಟಿಗಳು ೨೩೪. ೨೨೭ ಸೊಸೈಟಿಗಳು ಇನ್ನೂ ಸ್ಟಾರ್ಟ್ ಆಗಿಲ್ಲ. ಆದರೆ ರಿಜಿಸ್ಟರ್ ಆಗಿವೆ. ಅವುಗಳು ಇನ್ನು ಕಾರ್ಯ ಚಟುವಟಿಕೆ ಮಾಡುತ್ತಿಲ್ಲ. ನಾಲ್ಕೈದು ಸೊಸೈಟಿಗಳು ಮಿಸ್ ಅಪ್ರೊಪ್ರಿಯೇಷನ್ ಮಾಡಿರುವುದರಿಂದ ಕ್ಲೋಸ್ ಆಗಿವೆ.

ಶ್ರೀ ನೇದಾಂತ ಹೆಮ್ಮಿಗೆ.—ಈ ರೈತರು ತಮಗೆ ತಮ್ಮ ಸಹಕಾರ ಸಂಘಗಳ ಮೂಲಕ ಹಾಲು ಸರಬರಾಜು ಮಾಡುತ್ತಾರೆ. ಈ ಸಹಕಾರ ಸಂಘಗಳ ಮೂಲಕ ಅವರಿಗೆ ಹಸುವೇ ಇರಲೀ, ಎಮ್ಮೆಯೇ ಇರಲಿ, ಅದಕ್ಕೆ ಅವಶ್ಯಕವಾದ ಬೂಸಾ, ಕಡಲೆ ಹೊಟ್ಟು, ಹಿಂಡಿ ಮತ್ತು ಅತ್ಯಾವಶ್ಯಕವಾಗಿ ತಕ್ಷಣ ಬೇಕಾದ ಚುಚ್ಚುಮದ್ದು ಇವುಗಳನ್ನು ದೊರಕಿಸಿಕೊಡುವುದಕ್ಕೆ ಈ ಸಹಕಾರಸಂಘಗಳ ಮೂಲಕ

ಏನಾದರೂ ಏರ್ಪಾಡು ಮಾಡಿದ್ದೀರಾ ? ಎರಡನೆಯದು, ಈ ಹಸು ಹಾಲು ಮತ್ತು ಎಮ್ಮೆ ಹಾಲು ಎರಡನ್ನೂ ಮಿಕ್ಸ್ ಮಾಡಿ ಡೈರಿಗಳ ಮೂಲಕ ಕೊಡುತ್ತಿದ್ದೀರಿ. ಎರಡನ್ನೂ ಮಿಕ್ಸ್ ಮಾಡುವುದರಿಂದ ಇದು ಕಲಬೆರಕೆ ಆಗುವುದಿಲ್ಲವೆ ?

ಶ್ರೀ ಮಹಮದ್ ಮೋಹಿನುದ್ದೀನ್.—ಸಭಾಧ್ಯಕ್ಷರೇ, ಕೋಆಪರೇಟೀವ್ ಸೊಸೈಟಿವ್ ಸೊಸೈಟಿಗಳ ಮೂಲಕ ಕ್ಯಾಟಲ್‌ಫೀಡ್‌ನ್ನು ಸಪ್ಲೈ ಮಾಡುತ್ತಿದ್ದೇವೆ. ಹಸು ಮತ್ತು ಎಮ್ಮೆ ಹಾಲನ್ನು ಮಿಕ್ಸ್ ಮಾಡುವುದರಿಂದ ಕಲಬೆರಕೆ ಆಗುವುದಿಲ್ಲವೇ ಎಂದು ಕೇಳಿದ್ದಾರೆ, ಇಲ್ಲ, ಆಗುವುದಿಲ್ಲ. ಏಕೆಂದರೆ ಎಮ್ಮೆ ಹಾಲಿನಲ್ಲಿ ಫ್ಯಾಟ್ ಕಂಟೆಂಟ್ಸ್ ೪.೫ ರಿಂದ ೧೦ ಪರ್ಸೆಂಟ್ ಇರುತ್ತದೆ. ಹಸು ಹಾಲಿನಲ್ಲಿ ೩.೫ ರಿಂದ ೬ ಪರ್ಸೆಂಟ್ ಫ್ಯಾಟ್ ಇರುತ್ತದೆ. ಮತ್ತು ಪೂರುವ ಹಾಲಿನಲ್ಲಿ ೪.೫ರಿಂದ ೮.೫ ಪರ್ಸೆಂಟ್ ಇರುತ್ತದೆ. ಇದನ್ನು ಮಿಕ್ಸ್ ಮಾಡಿ ಫ್ಯಾಟ್ ಕಂಟೆಂಟ್ಸ್ ತೆಗೆದು ಪೂರುವುದರಿಂದ ಅದು ಅಡಲ್ಟ್ರೇಷನ್ ಆಗುವುದಿಲ್ಲ. ಇದು ಒಂದು ಪ್ರೊಸೆಸ್. ಬಳಕೆದಾರರಿಗೆ ಹಾಲು ಕೊಡುವಾಗ ಅನುಸರಿಸತಕ್ಕ ಒಂದು ಕ್ರಮ.

ಶ್ರೀ ವೇದಾಂತ ಹೆಮ್ಮಿಗೆ.—ಕೊನೆಯ ಪ್ರಶ್ನೆ ಕೇಳುತ್ತಿದ್ದೇನೆ. ನಮ್ಮ ಹಳ್ಳಿಗಳಲ್ಲಿ ಹಿರೀಕರು ಹೇಳುತ್ತಾರೆ, ಏನೆಂದರೆ ಎಮ್ಮೆ ಹಾಲು ಕುಡಿದರೆ ಬುದ್ಧಿ ಮಂದವಾಗುತ್ತದೆ ಎಂದು.

ಶ್ರೀ ಬಿ. ಲಕ್ಕಪ್ಪ.—ಇವರು ಯಾವ ಹಾಲು ಕುಡಿದಿದ್ದಾರೆ ?

ಶ್ರೀ ಎಂ. ರಘುಪತಿ.—ಅವರು ಕುಡಿದಿರುವುದು ಮೇಕೆ ಹಾಲು.

ಶ್ರೀ ವೇದಾಂತ ಹೆಮ್ಮಿಗೆ.—ಹಸು ಹಾಲಿಗೂ ಎಮ್ಮೆ ಹಾಲಿಗೂ ವ್ಯತ್ಯಾಸ ಏನಿದೆ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ನೀವು ಹಸುವಿನ ಹಾಲು ಕುಡಿಯುತ್ತೀರೋ ಅಥವಾ ಎಮ್ಮೆ ಹಾಲನ್ನು ಕುಡಿಯುತ್ತೀರೋ ?

ಶ್ರೀ ಜೆ. ಹೆಚ್. ಪಟೇಲ್.—ಉಪಾಧ್ಯಕ್ಷರೇ, ಚಿಕ್ಕ ಮಕ್ಕಳು ಇದ್ದಾಗ ಹಾಲು ಕುಡಿಯುತ್ತಾರೆ, ಕೆಲವರು ಹಸುವಿನ ಹಾಲು ಲಭ್ಯವಿದ್ದರೆ ಕುಡಿಯುತ್ತಾರೆ, ಇದು ಹಳ್ಳಿಗಳಲ್ಲಿ ಹೆಚ್ಚು. ಈ ಹಾಲು ಕುಡಿಯುವುದರಿಂದ ಬುದ್ಧಿ ಯಾವ ರೀತಿ ಹೆಚ್ಚಾಗುತ್ತದೆ ಅಥವಾ ಕಡಿಮೆಯಾಗುತ್ತದೆ ಎಂದು ಇಲ್ಲಿಯವರೆಗೂ ಅಂಕಿಅಂಶ ಸಿಕ್ಕಿಲ್ಲ. ಮಾನ್ಯ ಸದಸ್ಯರು ವಯಸ್ಸಾದ ಮೇಲೆ ಎರಡನ್ನೂ ಬಿಟ್ಟು ಬೇರೆ ಏನು ಕುಡಿಯುತ್ತಾರೋ, ಅದರಿಂದ ಬುದ್ಧಿ ಜಾಸ್ತಿಯಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಒಂದು ಲೀಟರ್ ಹಾಲಿಗೆ ರೂ. 3-30 ರೈತರಿಗೆ ಕೊಡುತ್ತೀರಿ. ಆದರೆ 4-50ರೂ.ಗೆ ಮಾರುತ್ತೀರಿ. ಅಂದರೆ 1 ರೂಪಾಯಿ 20 ಪೈಸೆ ವ್ಯತ್ಯಾಸ ಇದೆ. ಇದನ್ನು ಯೂನಿಯನ್‌ನವರು ತೆಗೆದುಕೊಳ್ಳುತ್ತಾರೆ. ರೈತರಿಗೆ 4-50 ರೂ. ಕೊಡುವ ಹಾಗೆ ಮಾಡುತ್ತೀರಾ ? ಈಗ ಬೂಸಾ ರೇಟು ಜಾಸ್ತಿಯಾಗಿದೆ ಮತ್ತು ಹಸುಗಳ ರೇಟು ಕೂಡ 3 ಸಾವಿರದಿಂದ 6 ಸಾವಿರವಾಗಿದೆ. ಆದ್ದರಿಂದ ಹಾಲಿನ ದರವನ್ನು ಇನ್ನೂ ಒಂದು 50 ಪೈಸೆ ಜಾಸ್ತಿ ಮಾಡುತ್ತೀರಾ ?

ಶ್ರೀ ಮಹಮದ್ ಮೊಯಿನುದ್ದೀನ್.—ಈಗ ನಾವು ಮಾರುತ್ತಿರುವುದು 4.50 ರೂ. ಮತ್ತು ಪ್ರೊಕ್ಯೂರ್‌ಮೆಂಟ್ ರೇಟ್ ಇರುವುದು 3.33 ರೂ. ಡಿಫರೆನ್ಸ್ 1.17 ರೂ. ಇದೆ. ಈ ಡಿಫರೆನ್ಸ್‌ನಲ್ಲಿ ಟ್ರಾನ್ಸ್‌ಪೋರ್ಟೇಷನ್, ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್, ಪ್ರೊಸೆಸಿಂಗ್ ಚಾರ್ಜಸ್, ಅದೆಲ್ಲಾ ಇದರಲ್ಲಿ ಬಂದುಬಿಡುತ್ತದೆ. ಆದ್ದರಿಂದ ಈಗ ಕೊಡುತ್ತಿರುವ 3 ರೂ. 33 ಪೈಸೆ ಏನಿದೆ, ಅದು ರೀಸನಬಲ್ ಆಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—50 ಪೈಸೆ ಜಾಸ್ತಿ ಮಾಡಿ. ಈಗ ಕೊಡುತ್ತಿರುವುದು ಬಹಳ ಕಡಿಮೆ. ಇದನ್ನು ರಿವೈಸ್ ಮಾಡಿ. ಹಸುವಿನ ರೇಟ್ ಜಾಸ್ತಿಯಾಗಿದೆ, ಬೂಸಾ ರೇಟು ಜಾಸ್ತಿಯಾಗಿದೆ.

ಶ್ರೀ ಮಹಮದ್ ಮೊಯಿನುದ್ದೀನ್. ಸೆಲ್ಲಿಂಗ್ ರೇಟ್‌ನ್ನು 4.50 ರಿಂದ 5 ರೂಪಾಯಿ ಮಾಡುವ ಕಾಲದಲ್ಲಿ ಇದನ್ನು ರಿವೈಸ್ ಮಾಡುತ್ತೇವೆ.